# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/22020-21 ದಿನಾಂಕ : 05/04/2021

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 05/04/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
4. ಡಾ|| ಪುಷ್ಪಲತ, ಆರೋಗ್ಯ ಇಲಾಖೆ
5. ಶ್ರೀ ವಿ.ನಾರಾಯಣ ಸ್ವಾಮಿ, ಜಾನುವಾರು ಅಧಿಕಾರಿ
6. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮನಾಥ್ ಎಸ್ ಜಾಧವ್,** ಸಹಾಯಕ ಅಭಿಯಂತರರು:- ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು

ವಿರೂಪಾಕ್ಷಪುರ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಲೈನ್ ಅಳವಸಿ ಮಣ್ಣು ಸರಿಯಾಗಿ ಮುಚ್ಚದೆಯಿರುವುದರಿಂದ ರಸ್ತೆಯಯಲ್ಲಿ ಗುಂಡಿ ಬಿದ್ದಿರುವುದನ್ನು ಸರಿಪಡಿಸಲು, ಲೇಕ್‌ಶೋರ್ ಗಾರ್ಡನ್ ಹಾಗೂ ಮಾರುತಿ ಲೇಔಟ್ 4ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ಲೈನ್ ಬ್ಲಾಕ್ ಆಗಿರುವುದರಿಂದ ಸರಿಪಡಿಸಲು ಕೋರಿದರು. ಹಾಗೂ ಹೆಚ್.ಎಂ.ಟಿ ಲೇಔಟ್, ಟೆಲಿಕಾಂ ಲೇಔಟ್ ಪ್ರದೇಶಗಳಲ್ಲಿ ಸರಿಯಾಗಿ ನೀರಿನ ಪೂರೈಕೆಯಾಗದೆ ಇರುವುದರಿಂದ ಇಲ್ಲಿನ ನಾಗರೀಕರಿಗೆ ಸಮಸ್ಯೆಯಾಗುತ್ತಿರುವುದರಿಂದ ಸರಿಪಡಿಸಲು ಕೋರಿದರು.

ಕ್ರಮ: ಸ.ಕಾ.ಅ ಬಿಡಬ್ಲ್ಯೂಎಸ್.ಎಸ್‌ಬಿ

ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದರಿಂದ ವೆಟ್‌ಮಿಕ್ಸ್ ಹಾಕಿ ಭರ್ತಿ ಮಾಡಲು ಕೋರಿದರು.

ಕ್ರಮ: ಸಕಾಅ, ವಿಲುವಿ

ಜಿ.ಕೆ.ವಿ.ಕೆ ಡಬಲ್ ರಸ್ತೆಯಲ್ಲಿ ಖಾಯಂ ಆಗಿ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಿರುವುದಿಲ್ಲವೆಂದು ದೂರಿದರು.

ಕ್ರಮ: ಸ.ಕಾ.ಅ, ಘ.ತ್ಯಾ.ನಿ

ದುರ್ಗಾ ಲೇಔಟ್ 4ನೇ ಮುಖ್ಯ ರಸ್ತೆಯಲ್ಲಿ ವಿದ್ಯುತ್ ದೀಪ ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವುದರಿಂದ ಸರಿಪಡಿಸಲು ಕೋರಿದರು.

ಕ್ರಮ: ಸ.ಕಾ.ಅ, ವಿದ್ಯುತ್

ಹೆಚ್.ಎಂ.ಟಿ ಲೇಔಟ್, ದುರ್ಗಾ ಲೇಔಟ್, 4ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆಯಲ್ಲಿ ಒಣಗಿದ ಮರವನ್ನು ಕತ್ತರಿಸಲು ಹಾಗೂ ಬೃಹದಾಕಾರವಾಗಿ ಬೆಳೆದಿರುವ ರೆಂಬೆ ಕೊಂಬೆಗಳನ್ನು ಕತ್ತರಿಸಲು ಕೋರಿದರು..

ಕ್ರಮ: ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ

ನೋಡೆಲ್ ಅಧಿಕಾರಿ: ಕೋವಿಡ್ -19 ರೋಗದ ತಡೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಆದಷ್ಟು ಎಚ್ಚರಿಕೆಯಲ್ಲಿ ಇರುವುದರಿಂದ ಕೋವಿಡ್-19 ರೋಗವನ್ನು ನಿಯಂತ್ರಣದಲ್ಲಿಡಲು ಅನುಕೂಲವಾಗುತ್ತದೆಂದು ತಿಳಿಸುತ್ತಾ ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

Assistant Executive Engineer
Vidyaranyapura Sub Division
BBMP, Bangalore - 97

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.